**PREMIUM POINT**

Authorised Premium Collection Centre

**Harishchandra Burde**

Member : Chairman's Club LIC Agent

MDRT- For 5th time

Shankar Shet Towers

Vadiraj Jewellers, Kundapur

LIC

भारतीय जीवन बीमा निगम

LIFE INSURANCE CORPORATION OF INDIA

www.licindia.in

**ಪ್ಲೆಸೆಂಟ್®**

ಗೃಹಶೋಭೆಗಾಗಿ

• ಪೀಠೋಪಕರಣಗಳು • ಪರದೆಗಳು • ಒಳಾಂಗಣಾಲಂಕಾರಗಳು

ಕುಂದಾಪುರ : ಹೆಬ್ಬಾರ್ ಕಾಂಪ್ಲೆಕ್ಸ್, ಶಾಸ್ತ್ರಿ ಸರ್ಕಲ್ ಬಳಿ
ಫೋನ್ : 9845607635, 9141630193

ಬ್ರಹ್ಮಾವರ : ಮ್ಯಾಕ್ಸ್ ಸೆಂಟರ್, ರೋಟರಿ ಹಾಲ್ ಬಳಿ
ಫೋನ್ : 9986450986, 9380697091

ಸಹ ಸಂಸ್ಥೆ : ಬೆಡ್ ಸೆಂಟರ್ (1985ರಿಂದ) ವೈಶಾಲಿ ಕಾಂಪ್ಲೆಕ್ಸ್, ಶಾಸ್ತ್ರಿ ಸರ್ಕಲ್ ಬಳಿ, ಕುಂದಾಪುರ.
ಫೋನ್ : 9620582011 (ಇದರ ಯಾವುದೇ ಶಾಖೆಗಳಿರುವುದಿಲ್ಲ)

ಎಲ್ಲಾ ತರಹದ ಫರ್ನಿಚರ್, ಕರ್ಟನ್ಸ್ ಹಾಗೂ ಬೆಡ್‌ಗಳಿಗಾಗಿ

**ಫರ್ನಿಚರ್ ಸೆಂಟರ್**

**ಪುಪ್ಪಾ ಬಿಲ್ಡಿಂಗ್,**
**ಹೋಟೆಲ್ ಪಾರಿಜಾತದ ಎದುರುಗಡೆ,ಮುಖ್ಯರಸ್ತೆ,**
**ಕುಂದಾಪುರ**
**ಮೊ: 9480401872, 8971706782**

**ಕುರ್ಲಾನ್ ಕಂಪೆನಿಯ ಬೆಡ್‌ಗಳ ಅಧಿಕೃತ ಮಾರಾಟಗಾರರು**

ನಮ್ಮ ಗ್ರಾಹಕರಿಗೆ ಬಜಾಜ್ ಸಹಯೋಗದೊಂದಿಗೆ ಫರ್ನಿಚರ್‌ಗಳನ್ನು ಸುಲಭ ಕಂತುಗಳಲ್ಲಿ ನೀಡಲಾಗುವುದು

**ನಾಲಂದಾಗೆ ಭೇಟಿ ನೀಡಿದ್ದೀರಾ?**

**ನಾಲಂದಾದಲ್ಲಿ ನಾಡಿ ಪರೀಕ್ಷೆ....!**

ನಿಮ್ಮ ದೇಹದ ಪ್ರಕೃತಿಯನ್ನು ತಿಳಿಯಲು ಪ್ರಾಚೀನ ಆಯುರ್ವೇದದ ಸಾಧನ ನಾಡಿ ಪರೀಕ್ಷೆ ನೆರವಾಗುತ್ತದೆ. ನಾಲಂದಾದಲ್ಲಿ ಇದೇ ತಿಂಗಳ 27 ಮತ್ತು 28 ರಂದು ಡಾ॥ ಸಾಯಿರಾಮ್ ಅವರಿಂದ ನಾಡಿ ಪರೀಕ್ಷೆ ಕಾರ್ಯಕ್ರಮ ನಡೆಯಲಿದೆ. ನಾಡಿ ಪರೀಕ್ಷೆಯಿಂದ ನಿಮ್ಮ ದೇಹದ ಈಗಿನ ಪರಿಸ್ಥಿತಿಯ ನಿಖರವಾದ ಪರಿಚಯದೊಂದಿಗೆ ಭವಿಷ್ಯದಲ್ಲಿ ನಿಮಗೆ ಬರಬಹುದಾದ ಸಮಸ್ಯೆಗಳ ಸುಳಿವೂ ಸಿಗುತ್ತದೆ. ನಾಡಿ ಪರೀಕ್ಷೆ ಕಾರ್ಯಕ್ರಮಕ್ಕೆ ಬರುವುದಿದ್ದರೆ ಇಂದೇ ನಿಮ್ಮ ಹೆಸರನ್ನು 9902680692 ಗೆ ಕರೆಮಾಡಿ ಹೆಸರನ್ನು ದಾಖಲಿಸಿ.

**ಮತ್ತಷ್ಟು ಮಾಹಿತಿ ಮುಂದಿನ ಸಂಚಿಕೆಯಲ್ಲಿ...!**

**ನಾಲಂದಾ**

ಶ್ರೀ ವೆಂಕಟರಮಣ ದೇವಸ್ಥಾನದ ಹತ್ತಿರ, ಮುಖ್ಯರಸ್ತೆ,
ಕುಂದಾಪುರ–576201
ಮೊ: 9448869963, 9632578968
ಸಮಯ: ಬೆಳಗ್ಗೆ 9.45 ರಿಂದ ಸಂಜೆ 7.30
ಭಾನುವಾರ ರಜೆ

# M. K. ಡಾಕ್ಟರುಗಳು



ಡಾ| ಎ. ರಂಜಿತ್ ಕುಮಾರ್ ಶೆಟ್ಟಿ.

“**M. S.** ಡಾಕ್ಟರು ಅಂತ ಕೇಳಿದ್ದೇವೆ, **M. D.** ಡಾಕ್ಟರು ಅಂತ ಕೇಳಿದ್ದೇವೆ, ಇದೇನಪ್ಪಾ **M. K.** ಡಾಕ್ಟರುಗಳೆಂದರೆ?” ಎಂದು ನೀವು ಕೇಳುವುದು ಸಹಜ. ಅದೇ ಸ್ವಾಮೀ ತಮ್ಮ ಬಗ್ಗೆ ತಾವೇ ಕೊಚ್ಚಿಕೊಳ್ಳುವ ಡಾಕ್ಟರುಗಳು – ಮಾಸ್ಟರ್ ಇನ್ ಕೊಚ್ಚಿಂಗ್, ಯಾನೇ **M. K.** ಇದು ಕೆಲವು ಡಾಕ್ಟರುಗಳ ಅಭ್ಯಾಸ, ಹಾಗೆ ಮಾಡಿದರೆ ಮಾತ್ರ ಜನರಿಗೆ ತಮ್ಮ ಬೆಲೆ ಗೊತ್ತಾಗುವುದು ಎನ್ನುವ ತಪ್ಪು ತಿಳುವಳಿಕೆ. ಈಗ ಜನರು ಎಷ್ಟು ತಿಳಿದುಕೊಂಡಿದ್ದಾರೆಂದರೆ ತಮ್ಮ ತಮಟೆಯನ್ನು ತಾವೇ ಬಾರಿಸುವ ಡಾಕ್ಟರುಗಳನ್ನು ಯಾರೂ ನಂಬುವುದಿಲ್ಲ ಮಾತ್ರವಲ್ಲ ಅಂತವರನ್ನು ಅನುಮಾನದಿಂದಲೇ ನೋಡುವ ಸಂಭವವೇ ಜಾಸ್ತಿ. ನಿಜವಾಗಿ ತನ್ನ ವಿದ್ಯೆಯಲ್ಲಿ ಪರಿಣಿತನಾದವನಿಗೆ ಈ ಬಡಾಯಿಯ ಅಗತ್ಯವಿಲ್ಲ. ಅವನ ಪ್ರಾವಿಣ್ಯತೆ ಏನೆನ್ನುವುದು ಜನರಿಂದ ಜನರಿಗೆ (ಬಾಯಿ ಮಾತಿನ ಪಬ್ಲಿಸಿಟಿ) ತಾನಾಗಿಯೇ ಹರಡುತ್ತದೆ. ಆದರೇನು ಮಾಡುವುದು ಕೆಲವು ಡಾಕ್ಟರುಗಳಿಗೆ ಅದೊಂದು ಚಪಲ.

ಇತ್ತೀಚೆಗೆ ನನ್ನ ಸಂಬಂಧಿಕರೊಬ್ಬರಿಗೆ ಬೆಂಗಳೂರಿನ ದೊಡ್ಡ ಆಸ್ಪತ್ರೆಯೊಂದರಲ್ಲಿ ಅಪರೇಷನ್ ನಡೆಯಿತು. **O.T.** ಯ ಹೊರಗೆ ಮನೆಯವರು ಕಾಯುತ್ತಿದ್ದರು. ಬಸವಳಿದಂತೆ ತೋರುತ್ತಿದ್ದ ಡಾಕ್ಟರು ಹೊರಗೆ ಬಂದು “ದಯವಿಟ್ಟು ಈಗ ಯಾರೂ ನನ್ನನ್ನು ಮಾತಾಡಿಸಬೇಡಿ. ಮೊದಲು ಒಂದು ಬಿಸಿ ಟೀ ಕುಡಿದುಕೊಳ್ಳುತ್ತೇನೆ ಮಾರಾಯ್ರೆ. ಅದೆಂತಹ ಕಷ್ಟದ **Operation** ಅಂತೀರಿ. ಬೆವರಿಳಿದು ಹೋಯಿತು ನನಗೆ. ಎಲ್ಲಾ ಕಡೆ ದೊಡ್ಡ ಕರುಳು, ಮೂತ್ರಕೋಶ, ಗರ್ಭಕೋಶ ಇತ್ಯಾದಿಗಳೆಲ್ಲ ಅಂಟಿಕೊಂಡಿದ್ದವು. ಒಂದೊಂದನ್ನೇ ಬಿಡಿಸಿ ತೆಗೆಯಬೇಕಾದರೆ ನಾನು ಕಲಿತ ವಿದ್ಯೆಯಲ್ಲಾ ಖಾಲಿಯಾಯಿತು. ನನ್ನಂತಹ **Experienced** ಡಾಕ್ಟರಾದ್ದರಿಂದ ನಿಮ್ಮ ಪೇಶಂಟು ಬಚಾವಾದರು. ಇಲ್ಲವಾದರೆ ಅವಸ್ಥೆಯಾಗುತ್ತಿತ್ತು ಇವತ್ತು” ಎಂದು ಮತ್ತೂ ಒಂದು ಅರ್ಧ ಗಂಟೆ ಕೊರೆದರಂತೆ. ಟೀ ಕುಡಿಯುವ ಮೊದಲೇ ಇಷ್ಟು ಮಾತಾಡಿದವರು ಒಂದು ವೇಳೆ ಅದನ್ನು ಕುಡಿದ ನಂತರವಾದರೆ ಇನ್ನೆಷ್ಟು ಹೇಳಿಕೊಳ್ಳುತ್ತಿದ್ದರೆಂದು ಕಡೆಗೆ ಮನೆಯವರೇ ಮಾತಾಡಿಕೊಂಡು ನಕ್ಕರಂತೆ. ಆಪರೇಷನ್ ಕಷ್ಟಕರವಾಗಿತ್ತೆಂದು ಹೇಳಿದ್ದು ಅವರ ಚಾರ್ಜುಗಳನ್ನು ಇಮ್ಮಡಿಗೊಳಿಸುವ ಹುನ್ನಾರ ಕೂಡ ಆಗಿರಬಹುದೆಂದು ಅವರಲ್ಲಿ ಒಬ್ಬರು ಅನುಮಾನ ವ್ಯಕ್ತಪಡಿಸಿದರಂತೆ. ಒಬ್ಬ ಉತ್ತಮ ಪ್ರಾಮಾಣಿಕ ಸರ್ಜನ್ ಆಗಿದ್ದರೆ “ಅಪರೇಷನ್ ಸ್ವಲ್ಪ ಕಷ್ಟದಲ್ಲೇ ಆಯಿತು. ಅದರೆ ಮಾಡಬೇಕಾದ್ದನ್ನು ಮಾಡಿಯಾಗಿದೆ. ದೇವರಿದ್ದಾನೆ, ತೊಂದರೆಯಾಗಲಿಕ್ಕಿಲ್ಲ” ಎಂದಷ್ಟೇ ಹೇಳುತ್ತಿದ್ದರು. ಸ್ವಲ್ಪವಾದರೂ ಕ್ರೆಡಿಟನ್ನು ದೇವರಿಗೆ ಕೊಟ್ಟು ಅಗತ್ಯವಿದ್ದಷ್ಟೇ ಮಾತಾಡುವ ಡಾಕ್ಟರನ್ನು ಜನರು ಜಾಸ್ತಿ ನಂಬುತ್ತಾರೆ.

ಇನ್ನೊಬ್ಬಾತ ನನ್ನ ಪರಿಚಯದವ ಏಕ್ಸಿಡೆಂಟಿನಲ್ಲಿ ಮೂಳೆ ಮುರಿದುಕೊಂಡು ಬೇರೆ ಊರಿನಲ್ಲಿ ಎಡ್ಮಿಟ್ ಆಗಿದ್ದ. ಅಪರೇಷನ್ ಮಾಡಿದ ಮೂಳೆ ಡಾಕ್ಟರು ಮಾರನೇ ದಿನ **Rounds** ಮಾಡುತ್ತ ಅವನ ರೂಮಿಗೆ ಬಂದರು. ಆ ದಿನ ಅಪರೇಷನ್ನಿನ್ ರಿಸಲ್ಟ್ ನೋಡಲು ಪುನಃ **‘X’ray** ತೆಗೆಯಲಾಗಿತ್ತು. ಅದನ್ನು 2 ನಿಮಿಷ ದಿಟ್ಟಿಸಿ ನೋಡಿದ ಡಾಕ್ಟರು ಅವನ ಬೆನ್ನು ತಟ್ಟುತ್ತ ಹೇಳಿದರಂತೆ. “ನೀನು ತುಂಬ ಲಕ್ಕಿ. ನಿನ್ನ ಮೂಳೆಗಳು **Perfect** ಆಗಿ ಕೂಡಿಕೊಂಡಿವೆ. ಸತ್ಯ ಹೇಳುವುದಾದರೆ ಈ **Fracture** ಅನ್ನುವಂತದ್ದು ಇಷ್ಟು ಒಳ್ಳೆಯದಾಗಿ ಕೂಡಿಕೊಂಡಿರುವುದನ್ನು ನಾನು ನನ್ನ ಪುಸ್ತಕಗಳಲ್ಲಿಯೂ ನೋಡಿಲ್ಲ. ನಾನು ಮಾಡಿದ ಕೇಸುಗಳಲ್ಲಿಯೇ **No. 1** ಕೇಸು ಇದು” ಎಂದು ಹೇಳಿ ನಂತರ ಹತ್ತಿರದ ರೂಮಿಗೆ ಹೋದರು. ಅಲ್ಲಿ ಇದ್ದದ್ದು ಅದೇ ಏಕ್ಸಿಡೆಂಟಿನಲ್ಲಿ ಕೈ ಮುರಿದುಕೊಂಡಿದ್ದ ಇವನ ಸ್ನೇಹಿತ. ಅದು ಡಾಕ್ಟರಿಗೆ ಗೊತ್ತಿರಲಿಲ್ಲ. ಇವನು ಡಿಸ್‌ಚಾರ್ಜು ಯಾವಾಗ ಅಂತ ಕೇಳಲು ಡಾಕ್ಟರು ಹಿಂದೆನೇ ಹೋಗಿ ಅಲ್ಲಿ ನಿಂತಿದ್ದ. ಅಲ್ಲಿ ಡಾಕ್ಟರದ್ದು ಅದೇ ಡೈಲಾಗು ನಡೆದಿತ್ತು. “ನೀನು ತುಂಬಾ ಲಕ್ಕಿ... ನಾನು ಮಾಡಿದ ಕೇಸುಗಳಲ್ಲಿಯೇ **No. 1** ಕೇಸು ಇದು.” ಇತ್ಯಾದಿ ಹೇಳುತ್ತ ತಿರುಗಿ ನೋಡುತ್ತಾರೆ, ಇವನು ಹಲ್ಲು ಗಿಂಜುತ್ತ ನಿಂತಿದ್ದ. ಬೆಪ್ಪಾದ ಡಾಕ್ಟರು ಕೂಡ ಹಲ್ಲು ಕಿರಿದರು. ಇವನು ಕೇಳಬೇಕೆಂದು ಎಣಿಸಿಕೊಂಡನಂತೆ “ಹಾಗಾದರೆ ನೀವು ಮಾಡಿದ **No. 1** ಕೇಸು ಯಾವುದು ಸರ್? ಇವನದಾ, ನನ್ನದಾ ಎಂದು ಫೈನಲ್ ಆಗಿ ಹೇಳಿ ಸರ್” ಎಂದು. “ಗುಡ್, ಒಳ್ಳೆಯದಾಗಿ ಕೂಡಿಕೊಂಡಿದೆ” ಎಂದಷ್ಟೇ ಹೇಳಿದಿದ್ದರೆ ಡಾಕ್ಟರ್ ಮರ್ಯಾದೆಯೂ ಉಳಿಯುತ್ತಿತ್ತು ತಾನೇ?

ಮತ್ತೆ ಕೆಲವರು ತಮಗೆ ಎಷ್ಟು ವರ್ಷದ ಅನುಭವ ಇದೆ, ತಾವೆಷ್ಟು ಸರ್ಜರಿ ಮಾಡಿ ಜಯಗಳಿಸಿದ್ದೇವೆ ಎಂದು ಕೂಡ ಹೇಳಿಕೊಳ್ಳುವವರಿದ್ದಾರೆ. ಒಬ್ಬಾತ ತನ್ನ ದೊಡ್ಡ ಕರುಳಿನಲ್ಲಿ ಬೆಳೆದ ಗಡ್ಡೆಯನ್ನು ತೆಗೆಸಿಕೊಳ್ಳಲು ಸರ್ಜನ್ ಬಳಿ ಹೋಗಿದ್ದ. ಆಪರೇಶನ್ ಬಗ್ಗೆ ತೀರಾ ಹೆದರಿಕೆ ಮತ್ತು ಅನುಮಾನಗಳ ಅವನ ವರ್ತನೆಯನ್ನು ನೋಡಿ ಡಾಕ್ಟರಿಗೆ ಸ್ವಲ್ಪ ಸಿಟ್ಟೇ ಬಂದಿತ್ತು. “ನೋಡು ನಾನು ಈ ಆಪರೇಶನ್ ಏನಿಲ್ಲವೆಂದರೆ ಒಂದು ಲಕ್ಷ ಕೇಸುಗಳಿಗೆ ಮಾಡಿದ್ದೇನೆ. ನನ್ನ ಹತ್ತಿರಾನೆ ನಿನಗೆ ಧೈರ್ಯವಾಗದಿದ್ದರೆ ಉಳಿದ ಹೊಸಬ ಬಚ್ಚಾ ಡಾಕ್ಟರಗಳ ಬಳಿ ಹೋಗಿದ್ದರೆ ಹೇಗಿರುತ್ತಿತ್ತು?” ಎಂದು ಪ್ರಶ್ನಿಸಿದರಂತೆ ಆ ಡಾಕ್ಟರು. ಸರ್ಜನ್ ಆಗಿ ಪ್ರಾಕ್ಟಿಸ್ ಶುರು ಮಾಡಿ 10 ವರ್ಷಗಳಾಗಿತ್ತಷ್ಟೇ. “ಅಂದರೆ ಈವಯ್ಯ ದಿನಕ್ಕೆ 25 ರಿಂದ 30 ಬರೇ ದೊಡ್ಡ ಕರುಳಿನ ಗಡ್ಡೆಗಳನ್ನು ತೆಗೆಯುತ್ತಿದ್ದಾರೆಯೇ” ಎಂದು ಅವನಿಗೆ ಅನುಮಾನ ಬಂದದ್ದು ಸಹಜವಾಗಿತ್ತು. ಇಡೀ ಕರ್ನಾಟಕದಲ್ಲಿಯೇ ಅಷ್ಟು ಸಂಖ್ಯೆಯ ಕರುಳಿನ ಗಡ್ಡೆಗಳಿಗೆ ಒಂದೇ ದಿನದಲ್ಲಿ ಶಸ್ತ್ರಕ್ರಿಯೆ ನಡೆಯುತ್ತಿದೆಯೇ ಎನ್ನುವ ಪ್ರಶ್ನೆ ಕೂಡ ಮೂಡಿತ್ತು. ಅವೆಲ್ಲವನ್ನು ಇವರೊಬ್ಬರೇ ಮಾಡುತ್ತಿದ್ದದ್ದು ಹೌದಾದರೆ ದಿನಕ್ಕೆ 72 ಗಂಟೆಗಳೂ ಸಾಕಾಗಲಿಕ್ಕಿಲ್ಲ. ಮತ್ತೆ ಅವರ ಊಟ, ಶೌಚಕ್ರಿಯೆ, ನಿದ್ದೆ ಇವೆಲ್ಲಾ ಯಾವಾಗ? ಇಬ್ಬರು ಮಕ್ಕಳಾಗಲಿಕ್ಕೆ ಹೇಗೆ ಪುರುಸೊತ್ತು ಸಿಕ್ಕಿತ್ತು ಎಂಬೆಲ್ಲಾ ಪ್ರಶ್ನೆಗಳು ಅವನಲ್ಲಿ ಉದ್ಭವವಾದುದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ಕೊಚ್ಚಿಕೊಳ್ಳುವವರು ಕೂಡ ತಮ್ಮ ಅಂಕಿ ಸಂಖ್ಯೆಗಳನ್ನು ಹೇಳಿಕೊಳ್ಳುವ ಮೊದಲು ಸ್ವಲ್ಪ ಜಾಗ್ರತೆ ವಹಿಸಬೇಕಾಗುತ್ತದೆ.



ನನಗೆ ಗೊತ್ತಿರುವ ಡಾಕ್ಟರಿಗೊಮ್ಮೆ ಸ್ವರ ಬಿದ್ದಿತ್ತು. ಅವರ ಬಳಿ ಮೂಲವ್ಯಾಧಿಯ ಅಪರೇಶನ್ನಿಗಾಗಿ ಒಬ್ಬ ಪೇಶಂಟು ಬಂದಿದ್ದ. ಅವನಿಗೆ ಧೈರ್ಯ ತುಂಬಲು ಮುಂದೆ ಕುಳಿತಿದ್ದ ಅವನ ಕಿವಿಗೆ ಸ್ವಲ್ಪ ಹತ್ತಿರವಾಗಿ ಬಂದು ತಮ್ಮ **Whispering** ಸ್ವರದಲ್ಲಿ “ಇಷ್ಟರವರೆಗೆ 300 ಕೇಸುಗಳಿಗೆ ಈ ಓಪರೇಶನ್ ಮಾಡಿದ್ದೇನೆ” ಎಂದರು. ಆ ಪೇಶಂಟು ಹೌಹಾರಿ “ಅಯ್ಯೋ ಏನಾಯ್ತು ಸರ್, ಅವರೆಲ್ಲ ಸತ್ತು ಹೋದ್ರಾ?” ಎಂದು ಕೇಳಿದಾಗ ಆ ಡಾಕ್ಟರಿಗೆ ಸಿಟ್ಟೇ ಬಂತು. “ನೀನೇನು ಬೆಪ್ಪುತಕ್ಕಡಿಯಾ? ಏನಂತ ತಿಳಿದಿದ್ದಿ ನನ್ನನ್ನು” ಎಂದು ಗದರಿಸಿದರು. “ಅಲ್ಲಾ ಸರ್ ಬೇರೆ ಯಾರಿಗೂ ಕೇಳದಂತೆ ಬಹಳ ಗುಟ್ಟಿನಲ್ಲಿ ನನ್ನ ಕಿವಿಯಲ್ಲಿ ಪಿಸಿ ಪಿಸಿ ಅಂತ ಹೇಳಿದ್ರಲ್ಲಾ? ಅದಕ್ಕೆ ಅನುಮಾನವಾಯ್ತು” ಎಂದಾಗ ಡಾಕ್ಟರು ತಲೆ ಚಚ್ಚಿಕೊಂಡರು. “ನನ್ನ **Voice** ಸರಿ ಇಲ್ಲ ಮಾರಾಯ” ಎಂದು ಕಾರಣ ಕೊಟ್ಟರು. ಇದನ್ನು ಕೊಚ್ಚಿಕೊಂಡಿದ್ದು ಎಂದು ಹೇಳಲಿಕ್ಕಾಗುವುದಿಲ್ಲ ಬಿಡಿ.

ತುಂಬ ವರ್ಷಗಳ ಹಿಂದೆ ಪೇಪರಿನಲ್ಲಿ ಒಂದು ಚಿತ್ರ ಬಂದಿತ್ತು. ಒಬ್ಬಾತ ಮಹಿಳೆಯ ಹೊಟ್ಟೆಯ ಒಳಗಿಂದ ತೆಗೆದ **4 K.G.** ಯ ಗಡ್ಡೆ ಮತ್ತು ಅದರ ಪಕ್ಕದಲ್ಲೇ ಅದನ್ನು ಓಪರೇಶನ್ ಮಾಡಿ ತೆಗೆದ ಡಾಕ್ಟರ ಮುಖದ **Photo.** ಅಷ್ಟು ಕ್ಲಿಯರ್ ಇಲ್ಲವಾದ್ದರಿಂದ ನೋಡಿದವರಿಗೆಲ್ಲ **Confusion,** ಗಡ್ಡೆ ಯಾವುದು? ಡಾಕ್ಟರ ಮುಖ ಯಾವುದು? ಎಂದು. ಪೇಪರಿನವರು ಕೂಡ ವಿವರಣೆ ಕೊಡಬಹುದಿತ್ತು – ಎಡಕ್ಕೆ ಇರುವುದು ಗಡ್ಡೆ ಹಾಗೂ ಬಲಕ್ಕೆ ಇರುವುದು ಡಾಕ್ಟರ ಮುಖ ಎಂದು. ಅಂತೂ ಎಲ್ಲರೂ ಸಾಕಷ್ಟು ನಕ್ಕರು. ಈ ಪೇಪರುಗಳಲ್ಲಿ ತಾವು ಮಾಡಿದ ಓಪರೇಶನ್‌ಗಳಬ್ಬು ಹಾಕಿಸಿಕೊಳ್ಳುವುದು ಸಹಾ ಒಂದು ತರಹದ ಕೊಚ್ಚಿಂಗ್. ಬಹಳ ಅಪರೂಪದ **Operation** ಆದಲ್ಲಿ ನ್ಯೂಸ್ **Item** ಆಗಿ ಹಾಕುವುದರಲ್ಲಿ ಒಂದು ಅರ್ಥವಿದೆಯಾದರೂ ತಮ್ಮ **Photo** ಹಾಕಿಸಿಕೊಳ್ಳುವುದು ಸ್ವಲ್ಪ ಜಾಸ್ತಿ ಎನಿಸುವುದಿಲ್ಲವೇ? **4 K.G.** ಯ ಗಡ್ಡೆಯನ್ನು ವರ್ಷಗಟ್ಟಲೆ ಹೊಟ್ಟೆಯಲ್ಲಿಟ್ಟುಕೊಂಡೇ ಸಹಿಸಿಕೊಂಡ ಮಹಿಳೆಗೆ ಮೊದಲು ಶಹಬ್ಬಾಸ್ ಹೇಳಬೇಕಲ್ಲವೇ? ಅದೇ ರೀತಿ ಮೊದಲೆಲ್ಲಾ ‘ತ್ರಿವಳಿ ಜನನ’ ಆಸ್ಪತ್ರೆಯಲ್ಲಿ ನಡೆದಾಗ ಪೇಪರಿನಲ್ಲಿ ಹಾಕಿಸಿಕೊಳ್ಳುತ್ತಿದ್ದರು. ಇದರಲ್ಲಿ ಹೆರಿಗೆ ಡಾಕ್ಟರದೇನು ಹೆಚ್ಚುಗಾರಿಕೆ? ಮೂರಾಗಲಿ ಎಂಟಾಗಲಿ ಆ ಮಕ್ಕಳನ್ನು ಹೊಟ್ಟೆಯಲ್ಲಿ ಸುಧಾರಿಸಿಕೊಂಡು ಆಮೇಲೆ ಹೆತ್ತಾಕೆಗೆ **Credit** ಕೊಡಬೇಕು ತಾನೇ? ಮಕ್ಕಳ ಭಾರ ಅತೀ ಕಡಿಮೆ ಇದ್ದು ಅವುಗಳನ್ನು ಪಾರು ಮಾಡಿದ ಮಕ್ಕಳ ತಜ್ಞರಾದರೂ ಸ್ವಲ್ಪ ತಮ್ಮ ಬೆನ್ನುಗಳನ್ನು ತಾವೇ ತಟ್ಟಿಕೊಳ್ಳಬಹುದೇ ಹೊರತು ಡೆಲಿವರಿ ಮಾಡಿದ ಡಾಕ್ಟರುಗಳ ವಿಶೇಷತೆ ಏನೇನೂ ಇಲ್ಲ.

ನಾನು ಕೂಡ ಈ ಅಭ್ಯಾಸದಿಂದ ಹೊರತಾಗಿರಲಿಲ್ಲ. ನಾನು ಅದನ್ನು ಎಂದೂ ಮಾಡಿಲ್ಲ ಎಂದು ಹೇಳಿದರೆ ಅದು ಕೂಡ ಒಂದು ತರಹ ಕೊಚ್ಚಿಂಗೇ ಆಗುತ್ತದೆ. ಯಾಕೆ ಹೇಳಿದ್ದೆಂದರೆ “ಏನಿಲ್ಲವೆಂದರೆ ಲಕ್ಷಗಟ್ಟಲೆ ಹೆರಿಗೆ ಮಾಡಿಸಿರಬಹುದು ನಾನು. ನನ್ನನ್ನೇ ಪ್ರಶ್ನಿಸುತ್ತೀರಾ?” ಎಂದು ಉಡಾಫೆಯಲ್ಲಿ ಅಪರೂಪಕ್ಕೊಮ್ಮೆ ಹರಿಹಾಯ್ದದುಂಟು. ಯಾರೂ ಸ್ವಲ್ಪ ಬುದ್ಧಿ ಉಪಯೋಗಿಸಿ ನನ್ನನ್ನು ಪ್ರಶ್ನಿಸಿಲ್ಲವಾದ್ದರಿಂದ ಪಾರಾದೆ. ಯಾಕೆಂದರೆ ಮೊದಲೆಲ್ಲಾ ವರ್ಷಕ್ಕೆ ಒಂದು ಸಾವಿರಕ್ಕೂ ಮಿಕ್ಕಿ ಹೆರಿಗೆಗಳು ನನ್ನಲ್ಲಿ ಆಗುತ್ತಿದ್ದದ್ದು ಹೌದಾದರೂ ಲಕ್ಷ ಕೇಸುಗಳ ಅನುಭವ ಎಂದು ಹೇಳಿಕೊಳ್ಳುವ ಮೊದಲು ನಾನು ನೂರು ವರ್ಷವಾದರೂ ಕೆಲಸ ಮಾಡಿರಬೇಕು. ನಾನು ಒಂದು ದಿನ ಪುರುಸೊತ್ತಿನಲ್ಲಿ ಸ್ವಲ್ಪ **Calculate** ಮಾಡಿದಾಗ ಈ ಅಂಶ ಗೋಚರಿಸಿ ಅನಂತರ ಈ ಡೈಲಾಗನ್ನು ನಿಲ್ಲಿಸಿ ಸುಮಾರು ಕಾಲವಾಯ್ತು. ಕಾಲವೇ ನಮ್ಮನ್ನು ಪಕ್ವವಾಗುವಂತೆ ಮಾಡುತ್ತ ಹೋಗುತ್ತದೆ.

ಯಾವುದಕ್ಕೂ ಈ ಲೇಖನ ಓದಿ ಯಾವ ಡಾಕ್ಟರುಗಳೂ ಬೇಜಾರು ಮಾಡಿಕೊಳ್ಳಬಾರದು. ಹಾಗೆ ಒಂದು ವೇಳೆ ಯಾರಾದರೂ ಬೇಸರ ಮಾಡಿಕೊಂಡರೆ ಅವರು **M. K.** ಡಾಕ್ಟರುಗಳೆಂದೇ ಅರ್ಥ. ಇಲ್ಲವಾದರೆ ಕುಂಬಳಕಾಯಿ ಕಳ್ಳ ಎಂದ ಕೂಡಲೇ ಹೆಗಲೇಕೆ ಮುಟ್ಟಿಕೊಳ್ಳಬೇಕಿತ್ತು ಅಲ್ಲವೇ?